ಮೂಲ ದಾವಾ ಸಂಖ್ಯೆ 8 /2016 ಪಿ ಡಬ್ಲ್ಯೂ 3 ಕೆ ಶಂಭಣ್ಣ ಬಿನ್ ಲೇಟ್ ಹುಚ್ಚಪ್ಪ

(ದಿನಾಂಕ 26-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಕೆ ಎಂ ಜಿ ವಕೀಲರಿಂದಃ-

ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರಕ್ಕೆ ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ಪ್ರಮಾಣಪತ್ರವು ಇಂಗ್ಲಿಷಿನಲ್ಲಿ ಬರೆಯಲಾಗಿರುತ್ತದೆಂದರೆ ಸರಿ. ಇಂಗ್ಲೀಷ್ ಭಾಷೆ ನನಗೆ ಅರ್ಥವಾಗುವುದಿಲ್ಲವೆಂದರೆ ಸರಿ. ವಾದಿ ಸಿದ್ದಪ್ಪನ ಹೆಂಡತಿ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಸಾವಿತ್ರಮ್ಮನ ಗಂಡನ ಹೆಸರು ಕೊಟ್ಟಬಜ್ಜಯ್ಯ ಭರಮಪ್ಪ ಎಂದು ಬರೆದಿರುವುದು ಸರಿ ಇರುವುದಿಲ್ಲ. ಸಾವಿತ್ರಮ್ಮನ ಗಂಡನ ಹೆಸರು ಸಿದ್ದಪ್ಪ. ದಾವಾ ಶೆಡ್ಯೂಲ್ ಬಿ ಆಸ್ತಿಯು ಎಷುಟ ಎಕರೆ ಇರುತ್ತದೆಂದು ನನಗೆ ಗೊತ್ತಿರುವುದಿಲ್ಲ. ದಾವಾ ಸರ್ವೆ ನಂ. 338 ಎ/2 ಒಟುಟ 3 ಎಕರೆ 29 ಸೆಂಟ್ಸ ಸ್ವತ್ತು ಯಾರ ಹೆಸರಿನಲ್ಲಿದೆ ಎಂದು ನಾನು ನೋಡಿರುವುದಿಲ್ಲ. ಸದರಿ ದಾವಾ ಸ್ವತ್ತು ಕೊಟ್ಟಬಜ್ಜಯ್ಯ ಭರಮಪ್ಪನ ಪಾಲಿಗೆ ಬಂದಿತ್ತು ಎಂದರೆ ಸರಿ. ಕೊಟ್ಟಬಜ್ಜಯ್ಯ ಭರಮಪ್ಪನ ಮರಣಾ ನಂತರ ಆತನ ಹೆಂಡತಿಯಾದ ಈರಮ್ಮಳ ಹೆಸರಿಗೆ ಪಹಣಿ ದಾಖಲಾತಿ ವರ್ಗಾವಣೆಯಾಗಿರುತ್ತದೆಂದರೆ ಸರಿಯಲ್ಲ. ನಿಪಿ-5 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಕೊಟ್ಟಬಜ್ಜಯ್ಯ ಭರಮಪ್ಪನ ಮರಣಾ ನಂತರ ಆತನ ಹೆಂಡತಿಯಾದ ಈರಮ್ಮಳ ಹೆಸರಿಗೆ ಪಹಣಿ ವರ್ಗಾವಣೆಯಾಗಿರುವ ಬಗ್ಗೆ ಪ್ರಶ್ನಿಸಲಾಗಿ ಸಾಕ್ಷಿ ನನಗೆ ಗೊತ್ತಿರುವುದಿಲ್ಲವೆಂದು ಹೇಳುತ್ತಾರೆ.

ಕೊಟ್ಟಬಜ್ಜಿ ತೋಟಪ್ಪನಿಗೆ ಇಬ್ಬರು ಗಂಡು ಮಕ್ಕಳು. ಭರಮಜ್ಜ ಮತ್ತು ಸಿದ್ದಪ್ಪ. ಕೊಟ್ಟಬಜ್ಜಿ ತೋಟಪ್ಪನಿಗೆ ಮೂವರು ಮಕ್ಕಳು ಎಂದರೆ ನನಗೆ ಗೊತ್ತಿರುವುದಿಲ್ಲ, ಬಸಮ್ಮ

ಎಂಬ ಹೆಣ್ಣು ಮಗಳು ಇದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ಕೋಬಜ್ಜಿ ತೋಟಪ್ಪನ ಮಕ್ಕಳು ಬಗ್ಗೆ ನನಗೆ ಪೂರ್ಣ ಮಾಹಿತಿ ಇರುವುದಿಲ್ಲವೆಂದರೆ ಸರಿ. ಪ್ರತಿವಾದಿ ಬಸಮ್ಮನಿಗೆ ಮಲ್ಲಮ್ಮ ಎಂಬ ಮಗಳಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಈರಮ್ಮಳು ಸಕ್ರಿಹಳ್ಳಿ ಗ್ರಾಮದಲ್ಲಿ ತೀರಿಕೊಂಡಳು ಸದರಿ ಈರಮ್ಮ ಸಕ್ರಿಹಳ್ಳಿಯಲ್ಲಿ ಶಿವನಗೌಡ ಎಂಬುವವರ ಮನೆಯಲ್ಲಿದ್ದರು ಶಿವನಗೌಡ ಇವರು ಪ್ರತಿವಾದಿಯ ಗಂಡ ಎನ್ನುವ ಸಂಗತಿ ನನಗೆ ಗೊತ್ತಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಕೋಬಜ್ಜಿ ಭರಮಪ್ಪ ಮತ್ತು ಕೋಬಜ್ಜಿ ಸಿದ್ದಪ್ಪ ಇವರಿಗೆ 3 ಎಕರೆ 29 ಸೆಂಟ್ಸ ಮತ್ತು 3 ಎಕರೆ 59 ಸೆಂಟ್ಸ ಕ್ರಮವಾಗಿ ವಿಭಾಗವಾಗಿರುವ ಬಗ್ಗೆ ಬರೆಯಲಾಗಿರುತ್ತದೆಂದರೆ ಸರಿ. ಸದರಿ ಸ್ವತ್ತಿನಲ್ಲಿ 1 ನೇ ವಾದಿಯ ಗಂಡ ಕೋಬಜ್ಜಿ ಸಿದ್ದಪ್ಪ ತನ್ನ ಭಾಗದ 3 ಎಕರೆ 59 ಸೆಂಟ್ಸ ಸ್ವತ್ತನ್ನು ಮಾರಾಟ ಮಾಡಿದದರು ಎಂದರೆ ಸರಿ. ನನನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ವಾದಿಗಳು ಈರಮ್ಮಳನ್ನು ನೋಡಿಕೊಳ್ಳುತ್ತಿದ್ದರೆಂದು ಬರೆಸಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಗಳು ಯಾವಗಲೂ ಈರಮ್ಮಳನ್ನು ನೋಡಿಕೊಂಡಿರುವುದಿಲ್ಲವೆಂದರೆ ಸರಿಯಲ್ಲ. ವಾದಿಗಳು ದಾವಾಸ್ತಿಯನ್ನು ಉಳುಮೆ ಮಾಡಿರುವುದಿಲ್ಲ ಮತ್ತು ಯಾವಾಗಲೂ ಸ್ವಾಧೀನದಲ್ಲಿರುವುದಿಲ್ಲವೆಂದರೆ ಸರಿಯಲ್ಲ. ಈರಮ್ಮಳಿಗೆ ಸದರಿ ದಾವಾ ಸ್ವತ್ತನ್ನು ಮಾರಾಟ ಮಾಡುವಂತಹ ಹಕ್ಕು ಇರುವುದಿಲಲವೆಂದು ಸಾಕ್ಷ್ಯ ಪ್ರಮಾಣಪತ್ರದಲ್ಲಿ ಸುಳ್ಳಾಗಿ ಬರೆಸಲಾಗಿರುತ್ತದೆಂದರೆ ಸರಿಯಲ್ಲ. ಸದರಿ ದಾವಾಸ್ತಿಯು ಆಕೆಯ ಗಂಡನ ಮರಣಾನಂತರ ಆಕೆಗೆ ಮುಟೇಶನ್

ವರ್ಗಾವಣೆಯಾಗಿದ್ದು ಕಾರಣ ದಾವಾ ಸ್ವತ್ತಿನ ಸಂಪೂರ್ಣ ಮಾಲೀಕರಾಗಿದ್ದು ಅದನ್ನು ಮಾರಾಟ ಮಾಡುವಂತಹ ಹಕ್ಕನ್ನು ಹೊಂದಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಯು ತನ್ನ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವುದರಿಂದ ವಾದಿಯ ಸ್ವಾಧೀನತೆಗೆ ಧಕ್ಕೆ ಉಂಟುಪಡಿಸಿರುವುದಿಲ್ಲವೆಂದರೆ ಸರಿಯಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ

ಮರು ವಿಚಾರಣೆ - ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ